**ದಿ: 23.03.2018** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ :** 3 ನೇ ಎದುರುದಾರ **ಪರ ವಕೀಲರಿಂದ:**

ಅರ್ಜಿಯಲ್ಲಿ ಏನು ಬರೆದಿದ್ದಾರೆಂದು ನನಗೆ ಮಾಹಿತಿ ಇಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಬರೆದ ವಿಷಯ ನನಗೆ ನೆನಪಿಲ್ಲ. ಪಿರ್ಯಾದಿ ಕೊಟ್ಟ ಗುರುಶಿದ್ದಪ್ಪ ನನಗೆ ಮೈದುನ ಆಗಬೇಕು. ಗುರುಶಿದ್ದಪ್ಪ ಈಗ ಜೀವಂತ ಇದ್ದಾರೆ. ಅವರ ಸಾಕ್ಷಿಯನ್ನು ಮಾಡಿಸುತ್ತೇನೆ. ಆಸ್ಪತ್ರೆಗೆ ಹೋದಾಗ ರೋಗಿಗೆ ಏನು ಆಗಿದೆ ಎಂದು ಸಾಮಾನ್ಯವಾಗಿ ಬರೆದುಕೊಳ್ಳುತ್ತಾರೆಂದದರೆ ಸರಿ. ಸಾಮಾನ್ಯವಾಗಿ ರೋಗಿಗೆ ಏನು ಆಗಿದೆ ಎಂದು ಅವರ ಬಾಯಿಂದಲೇ ಕೇಳಿ ಆದರೆ ಅವರು ಒಂದು ವೇಳೆ ಮಾತನಾಡುವ ಸ್ಥಿತಿಯಲ್ಲಿ ಇಲ್ಲದೇ ಇರುವಾಗ ಅವರನ್ನು ಕರೆದುಕೊಂಡು ಬಂದ ವ್ಯಕ್ತಿಗಳಿಂದ ತಿಳಿದುಕೊಂಡು ದಾಖಲೆಗಳಲ್ಲಿ ನಮೂದಿಸುತ್ತಾರೆಂದರೆ ಸರಿ. ನನ್ನ ಮಗನನ್ನು ಪಿರ್ಯಾದಿ ಗುರುಶಿದ್ದಪ್ಪ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರೆಂದರೆ ಸರಿ. ನಮ್ಮ ಊರಾದ ಹೆಬ್ಬಳ್ಳಿ ಗ್ರಾಮದಲ್ಲಿ ಡಾ: ಪ್ರಕಾಶ ಎಸ್ ಆಲೂರ ಇದ್ದಾರೆಂದರೆ ಸರಿ. ನನ್ನ ಮಗನನ್ನು ಮೊದಲಿಗೆ ಸದರೀ ಡಾಕ್ಟರ ಬಳಿ ಕರೆದುಕೊಂಡು ಹೋಗಿದ್ದೆವು ಎಂದರೆ ಸರಿ. ಡಾ: ಪ್ರಕಾಶ ಆಲೂರ ಇವರ ಬಳಿ ನನ್ನ ಮಗನನ್ನು ಕರೆದುಕೊಂಡು ಹೋದಾಗ ಮೃತ ನನ್ನ ಮಗ ಹೇಳಿದಂತೆ ವರದಿ ಬರೆದುಕೊಂಡು ಪ್ರಥಮ ಚಿಕಿತ್ಸೆ ನೀಡಿದ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಬೇರೆ ಕಡೆಗೆ ಕಳುಹಿಸಿಕೊಟ್ಟರೆಂದರೆ ಸರಿ. ದಿನಾಂಕ : **04.09.2015** ರಂದು ಮೃತ ನನ್ನ ಮಗನನ್ನು ಡಾ: ಆಲೂರ ಬಳಿ ಕರೆದುಕೊಂಡು ಹೋಗಿದ್ದೆವು ಎಂದರೆ ಸರಿ. ನಂತರ ಮರುದಿನ ನನ್ನ ಮಗನನ್ನು ಬೇರೆ ಆಸ್ಪತ್ರೆಗೆ ಕರೆದುಕೊಂಡು ಹೋದೆವು.

ದಿ : **04.09.2015** ರಂದು ಪಿರ್ಯಾದಿ ಕೊಡಲು ಪ್ರಯತ್ನಪಟ್ಟಿದ್ದೇವೆ. ಹೆಬ್ಬಳ್ಳಿ ದಾರವಾಡದಿಂದ **7-8** ಕಿ ಮೀಟರ ದೂರದಲ್ಲಿದೆ ಎಂದರೆ ಸರಿ. ನನ್ನ ಮಗ ತಾನೇ ಬಿದ್ದು ಪೆಟ್ಟು ಮಾಡಿಕೊಂಡಿದ್ದೇನೆ ಡಾ: ಆಲೂರ ರವರ ಬಳಿ ಹೇಳಿಕೆ ನೀಡಿದ್ದಾನೆಂದರೆ ಸರಿಯಲ್ಲ. ಪಿರ್ಯಾದಿಯಲ್ಲಿ ಅಪಘಾತಕ್ಕೆ ಒಳಪಟ್ಟ ಗಾಡಿ ನಂಬರ ಮತ್ತು ಅದರ ವಿವರಗಳನ್ನು ನಮೂದು ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಪಿರ್ಯಾದಿಯನ್ನು ದಿನಾಂಕ : **07.09.2015** ರಂದು ಕೊಟ್ಟಿದ್ದಾರೆಂದರೆ ಸರಿ. ಮೃತ ನನ್ನ ಮಗನನ್ನು ಆಸ್ಪತ್ರೆಗೆ ದಾಖಲು ಮಾಡಿದ **2** ದಿನ ಬಿಟ್ಟು ಪಿರ್ಯಾದಿ ದಾಖಲಿಸಿದ್ದೇವೆಂದರೆ ಸರಿ. ಒಂದು ವೇಳೆ ಅಪಘಾತ ಆಗಿದ್ದರೆ ಗಾಡಿ ಸಂಪೂರ್ಣ

ಜಖಂ ಆಗುತ್ತಿತ್ತು ಎಂದರೆ ಸರಿ. ಮೃತ ನನ್ನ ಮಗ ಮನೆಯಲ್ಲಿ ಬಿದ್ದು ಗಂಭೀರ ಗಾಯ ಗೊಂಡು ಮೃತಪಟ್ಟಿದ್ದಾರೆಂದರೆ ಸರಿಯಲ್ಲ.

ನನ್ನ ಮಗ ಮೃತಪಟ್ಟ ಸಮಯದಲ್ಲಿ 24 ವರ್ಷ ಆಗಿತ್ತು ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿಲ್ಲ.

**(ಮುಂದಿನ ಪಾಟೀ ಸವಾಲಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.)**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಪ್ಪಾಡಿಸಲಾಯಿತು).

ಓ ಹೇ ಕೆ ಸರಿ ಇದೆ.

**3ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**